

# ಈ ಹುಳಗಳು!

ಇವು ತುಂಬ ಸೂಕ್ಷ್ಮ ಸಂವೇದನಾ ಜೀವಿಗಳು.
ಹತ್ತಿರ ಹೋದರೆ ಸರಕ್ಕನೆ ಮರೆಗೆ ಸರಿಯುತ್ತವೆ.
ಮತ್ತೆ ಮತ್ತೆ ಮರೆಗೆ ಜಾರುತ್ತಲೇ ಇರುತ್ತವೆ.

ಚಿತ್ರ ಬರಹ:
**ಗಣಪತಿ ಬಾಳೆಗದ್ದೆ**



ಪ್ರಕೃತಿಯ ಲೋಕದಲ್ಲಿ ಸಾವಿರಾರು ಕೀಟಗಳು. ಒಂದೊಂದರ ಆಕಾರವೂ ವಿಭಿನ್ನ. ನೋಡಲು ಒಂದಕ್ಕಿಂತ ಒಂದು ಸುಂದರ.

ಅಂತಹ ಸುಂದರ ಕೀಟಗಳಲ್ಲಿ ಉಚ್ಚೆಹುಳವೂ ಒಂದು. ಇಷ್ಟೊಂದು ಸುಂದರ ಕೀಟಕ್ಕೆ ಅದ್ಯಾಕೆ ಇಂತಹ ಕೊಳಕು ಹೆಸರು ಬಂತೋ.. ಎನ್ನಲಾಗದು. ಬಾಳೆ ಎಲೆಯ ಅಡಿಯಲ್ಲೋ,  ಲಕ್ಕಿ, ಗೊಬ್ಬರ ಮುಂತಾದ ಗಿಡಗಳಲ್ಲೋ ವಾಸಿಸುವ ಈ ಹುಳಗಳು ಸದಾ ಎಲೆಗಳ ರಸ ಹೀರುತ್ತಿದ್ದು, ತಮ್ಮ ಹಿಂಭಾಗದಿಂದ ನಿರಂತರ ಹನಿ ಉದುರಿಸುತ್ತಿರುತ್ತವೆ. ಅದಕ್ಕೆಂದೇ ಜನ ಇವುಗಳನ್ನು ಉಚ್ಚೆ ಹುಳ ಎಂದು ಕರೆಯುತ್ತಾರೆ.

ಇವು ತುಂಬ ಸೂಕ್ಷ್ಮ ಸಂವೇದನಾ ಜೀವಿಗಳು. ಹತ್ತಿರ ಹೋದರೆ ಸರಕ್ಕನೆ ಮರೆಗೆ ಸರಿಯುತ್ತವೆ. ಮತ್ತೆ ಮತ್ತೆ ಮರೆಗೆ ಜಾರುತ್ತಲೇ ಇರುತ್ತವೆ.

ಇವುಗಳ ಮೈಬಣ್ಣ ಅಚ್ಚಗೆಂಪು. ಯಾರೋ ಚಿಮುಕಿಸಿದ ನೆತ್ತರ ಬಿಂದುಗಳಿಗೆ ಜೀವ ಬಂದ ಹಾಗೆ ಕೆಂಪಗೆ ಸರಿದಾಡುತ್ತಿರುತ್ತವೆ. ಸೂಕ್ಷ್ಮವಾಗಿ ಗಮನಿಸಿದರೆ ಇವುಗಳ ಮುಖದ ಮೇಲೆ ಒಂದಿಷ್ಟು ಚುಕ್ಕೆಗಳೂ ಕಾಣಿಸುತ್ತವೆ. ಅಲ್ಲಲ್ಲಿ ಬೂದಿ ಸವರಿದ ಹಾಗೆ ಬೂದು ಬೂದು. ಇವು ಎಳವೆಯಲ್ಲಿ ಬೆಳ್ಳಗಿದ್ದು ಪ್ರಬುದ್ಧಾವಸ್ಥೆಗೆ ಬಂದಾಗ ಕೆಂಪಗಾಗುತ್ತವೆ.

ಇವು ತುಂಬ ನಿರುಪದ್ರವಿ ಹಾಗೂ ಅಪರೂಪದ ಜೀವಿಗಳೂ ಹೌದು. ಬೇಸಿಗೆ, ಮಳೆ ಮತ್ತು ಚಳಿಗಾಲ– ಹೀಗೆ ಎಲ್ಲ ಕಾಲಗಳಲ್ಲೂ ಕಾಣಸಿಗುತ್ತವೆ. ಮಳೆಗಾಲದ ಆರಂಭದಲ್ಲಿ ಗಂಡು–ಹೆಣ್ಣು ಮಿಲನಕ್ರಿಯೆಯ ನೋಟ ಸಾಮಾನ್ಯ. ಕೆಲವೇ ದಿನಗಳಲ್ಲಿ ಬೆಳ್ಳಗಿನ ಮರಿಗಳು ಕಾಣತೊಡಗುತ್ತವೆ.

